# ಕೌತುಕದ ಕಣ್ಣುಗಳ ಕಾಡುಪಾಪ

## ಫಿಲಿಪ್ಪೀನ್ಸ್ ಟಾರ್ಸಿಯರ್

ದೊಡ್ಡ ದೊಡ್ಡ ಕಣ್ಣುಗಳ, ಪುಟಾಣಿ ದೇಹದ ಈ 'ಫಿಲಿಪ್ಪೀನ್ಸ್ ಟಾರ್ಸಿಯರ್', 'ಜಗತ್ತಿನ ಅತಿ ಸಣ್ಣ ಕಾಡುಪಾಪ' ಎಂದೇ ಪ್ರಸಿದ್ಧ. ಈ ನಿಶಾಚರಿಯ ಜೀವನಶೈಲಿಯೇ ಕೌತುಕ.

■ ರೂಪಾ ಕೆ.ಎಂ.



'ಫಿಲಿಪ್ಪೀನ್ಸ್ ಟಾರ್ಸಿಯರ್' ಅನ್ನು ಸ್ಥಳೀಯವಾಗಿ 'ಮ್ಯಾಮಗ್', 'ಮ್ಯಾಗೊ' ಎಂದು ಕರೆಯಲಾಗುತ್ತದೆ.

ಒಟ್ಟು ಸಂಖ್ಯೆ, ಅಂದಾಜು
**2500**

ಜೀವಿತಾವಧಿ ವರ್ಷ
**12–20**

ತೂಕ
**85–165** ಕೆ.ಜಿ.

ಎತ್ತರ
**85–160** ಮಿ.ಮೀ.

ಇವು ಮಾಂಸಾಹಾರಿಗಳಾಗಿದ್ದು, ಕೀಟಗಳೇ ಪ್ರಧಾನ ಆಹಾರ. ಜೇಡರಬಲೆ, ಹಲ್ಲಿಗಳು, ಸಣ್ಣ ಸಣ್ಣ ಪಕ್ಷಿಗಳನ್ನು ತಿಂದು ಬದುಕುತ್ತವೆ.

ರೆಂಬೆಯಿಂದ ರೆಂಬೆಗೆ ಹಾರುವ ಈ ಕಾಡುಪಾಪ, 16.4 ಅಡಿ ಎತ್ತರದವರೆಗೂ ಹಾರಬಲ್ಲದು. ಇದರ ಮೆದುಳಿಗಿಂತ ಕಣ್ಣುಗಳ ಗಾತ್ರವೇ ದೊಡ್ಡದು. ಈ ಕಾಡುಪಾಪದ ಕಣ್ಣಿನ ಅಳತೆ 16 ಮಿ.ಮೀ.

ಕಣ್ಣುಗಳು ತಲೆಬುರುಡೆಗೆ ಹೊಂದಿಕೊಂಡಿರುವುದರಿಂದ ಕಣ್ಣುಗಳಿಗೆ ಚಲನೆ ಇರದು. ತಲೆಯನ್ನು 180 ಡಿಗ್ರಿವರೆಗೆ ತಿರುಗಿಸುವ ಸಾಮರ್ಥ್ಯ ಹೊಂದಿದೆ. ದೊಡ್ಡ ಕಣ್ಣುಗಳ ನೆರವಿನಿಂದ ಕಡಿಮೆ ಬೆಳಕಿನಲ್ಲಿಯೂ ಯಾವುದೇ ತೊಂದರೆಯಿಲ್ಲದೆ ನಡೆಯಬಲ್ಲದು.

ಬೂದು, ಕಂದುಮಿಶ್ರಿತ ಕೂದಲು ಹೊಂದಿರುವ ಈ ಕಾಡುಪಾಪದ್ದು ಸಪೂರ ದೇಹ. ಸಪೂರ, ಉದ್ದ ಬಾಲವಿದ್ದು, ಕೂದಲುಗಳಿಲ್ಲದೇ ನುಣುಪಾಗಿರುತ್ತದೆ. ಬೆರಳುಗಳೂ ಉದ್ದವಾಗಿದ್ದು, ತುದಿಯಲ್ಲಿ ಚಪ್ಪಟೆಯಾಕಾರದಲ್ಲಿರುತ್ತವೆ. ಮರದಿಂದ ಮರಕ್ಕೆ ಹಾರಿದಾಗ ಹಿಡಿತ ಸಿಗಲು ಬೆರಳುಗಳು ಸಹಕಾರಿ.

ಏಷ್ಯಾ ಖಂಡದ ಫಿಲಿಪ್ಪೀನ್ಸ್ ಈ ಕಾಡುಪಾಪಗಳ ಆವಾಸ. ಲೈಟೇ, ಸಮರ್, ದಿನಾಘಟ್, ಸಿಯಾರ್ಗೊ, ಬೊಹೊಲ್, ಮಿಂದಾನೊ, ಬಾಸ್ಲಿನ್, ಮರಿಪಿಪ್ಪಿ ದ್ವೀಪಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

ಫಿಲಿಪ್ಪೀನ್ಸ್ ಟಾರ್ಸಿಯರ್‌ಗಳು ನಿಶಾಚರಿಗಳು. ಬೆಳಗಿನ ಸಮಯದಲ್ಲಿಯೂ ಕ್ರಿಯಾಶೀಲವಾಗಿರಬಲ್ಲವು. ಬೆಳಗಿನ ಸಮಯ ದಟ್ಟ ಕಾಡಿನಲ್ಲಿ ನಿದ್ರೆ ಮಾಡಲು ಇಷ್ಟಪಡುತ್ತವೆ. ಸೂರ್ಯಾಸ್ತವಾಗುತ್ತಿದ್ದಂತೆ ಆಹಾರ ಹುಡುಕಿಕೊಂಡು ಹೋಗುತ್ತವೆ. ಇವು ಚುರುಕಾಗಿದ್ದು, ಮರದಿಂದ ಮರಕ್ಕೆ ಸುಲಭವಾಗಿ ನೆಗೆಯುತ್ತವೆ.



ಒಂಟಿಯಾಗಿರಲು ಹೆಚ್ಚು ಇಷ್ಟಪಡುತ್ತವೆ. ಕೆಲವೊಮ್ಮೆ ನಾಲ್ಕು ಅಥವಾ ಮೂರು ಸಹವರ್ತಿಗಳೊಂದಿಗೆ ಇರುತ್ತವೆ. ಮನುಷ್ಯರನ್ನು ಕಂಡರೆ ಹೆದರುತ್ತಾ ಕೀರಲು ಧ್ವನಿ ಹೊಮ್ಮಿಸುತ್ತವೆ. ಬೇರೆ ಸ್ತನಿಗಳಿಗೆ ಹೋಲಿಸಿದರೆ ಇವುಗಳ ಧ್ವನಿ ಕ್ಷೀಣವಾಗಿದ್ದರೂ ಸಂವಹನಕ್ಕಾಗಿ ಹಲವು ರೀತಿಯ ಧ್ವನಿಗಳನ್ನು ಹೊರಡಿಸಬಲ್ಲವು. ಗ್ರಂಥಿಗಳು ಸ್ರವಿಸುವ ಪರಿಮಳವನ್ನೇ ಗುರುತಾಗಿ ಬಳಸಿಕೊಂಡು ತಮ್ಮ ಪ್ರದೇಶದ ಗಡಿಗಳನ್ನು ನಿರ್ಮಿಸಿಕೊಳ್ಳುತ್ತವೆ.

ಜೀವಮಾನವಿಡೀ ಒಂದೇ ಸಂಗಾತಿಯೊಂದಿಗೆ ಇರಲು ಇವು ಇಚ್ಛಿಸುತ್ತವೆ. ವರ್ಷದ ಯಾವುದೇ ಅವಧಿಯಲ್ಲಿ ಸಂತಾನೋತ್ಪತ್ತಿ ನಡೆಸುತ್ತವೆ. ಗರ್ಭಧಾರಣೆಯಾಗಿ, 6 ತಿಂಗಳ ಅವಧಿಗೆ ಒಂದು ಬಾರಿ ಒಂದೇ ಮರಿ ಹಾಕುತ್ತದೆ. ತೆರೆದ ಕಣ್ಣುಗಳೊಂದಿಗೇ ಜನಿಸುವ ಕಾಡುಪಾಪ, ಹುಟ್ಟಿದ ಮರುದಿನವೇ ಎಂಥ ಮರವನ್ನಾದರೂ ಏರಬಲ್ಲದು; 42ರಿಂದ 60 ದಿನದ ಒಳಗೆ ತನ್ನ ಆಹಾರವನ್ನು ತಾನೇ ಹುಡುಕಿಕೊಳ್ಳುವಷ್ಟು ಶಕ್ತವಾಗುತ್ತದೆ. ಹುಟ್ಟಿದ ಒಂದರಿಂದ ಎರಡು ವರ್ಷದೊಳಗೆ ಲೈಂಗಿಕವಾಗಿ ಸಕ್ರಿಯಗೊಳ್ಳುತ್ತದೆ.